ದಿನಾಂಕಃ 26.06.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.
ಮುಂದುವರೆದ ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ –

ನಾನು ಅಂತಿಮ ವರದಿಯನ್ನು ಸಲ್ಲಿಸುವ ಮುಂಚೆ ಆರೋಪಿಯ ಕರ್ತವ್ಯ ನಿಷ್ಟೆಯ ಬಗ್ಗೆ ಯಾವುದೇ ಮಾಹಿತಿಯನ್ನು ಕಲೆ ಹಾಕಿರುವುದಿಲ್ಲ. ಆರೋಪಿಯ ಸೇವಾ ಅವಧಿಯಲ್ಲಿ ಅವರ ವಿರುದ್ದ ಯಾವುದೇ ವ್ಯತಿರಿಕ್ತ ವರದಿಗಳು ಇರಲಿಲ್ಲ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಆ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ಶೋಧ ನಡೆದ ಕಾಲಕ್ಕೆ ಆರೋಪಿ ವಿಜಯಪುರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು ಎನ್ನುವುದು ಸರಿ. ಆರೋಪಿ ಅಲ್ಲಿ ಚೆಕ್ ಪೋಸ್ಟ್ ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ Highest Revenue Generator for the State ಎಂದು ಹೆಸರು ಗಳಿಸಿದ್ದರು ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ . ಈ ರೀತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಆರೋಪಿಗೆ ಅವರ ಮೇಲಧಿಕಾರಿಗಳಿಂದ ಒತ್ತಡ ಬಂದಾಗ್ಯೂ ಸಹ ಅವುಗಳಿಗೆ ಒಳಗಾಗದೇ ಕರ್ತವ್ಯ ನಿರ್ವಹಿಸುತ್ತಿದುದ್ದರಿಂದ ಆರೋಪಿ ಮೇಲಧಿಕಾರಿಗಳ ಕೆಂಗಣ್ಣಿಗೆ ಗುರಿಯಾಗಿದ್ದರು ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ತನಿಖಾ ಅವಧಿಯಲ್ಲಿ ಕಲೆ ಹಾಕಿದ್ದ ದಾಖಲಾತಿಗಳ ಆಧಾರದ ಮೇಲೆ ಆರೋಪಿಯ ವಿರುದ್ದ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ತನಿಖೆಯ ವೇಳೆಯಲ್ಲಿ ಕಲೆ ಹಾಕಿದ ಎಲ್ಲಾ ದಾಖಲಾತಿಗಳನ್ನು ದೋಷಾರೋಪಣಾ ಪಟ್ಟಿಯೊಂದಿಗೆ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಆರೋಪಿಗೆ ಅನುಕೂಲಕರವಾಗುವಂತಹ ದಾಖಲಾತಿಗಳನ್ನು ನಾನು ನನ್ನ ವಿಚಾರಣೆಯ ಸಂದರ್ಭದಲ್ಲಿ ಹಾಜರುಪಡಿಸಿರುವುದಿಲ್ಲ ಎನ್ನುವುದು ಸರಿಯಲ್ಲ. ಅಂತಹ ದಾಖಲಾತಿಗಳನ್ನು ನಾನು ಚಾಸಾ.12 ರವರ ಮುಂದೆಯೂ ಸಹ ಹಾಜರುಪಡಿಸಿರುವುದಿಲ್ಲ ಎನ್ನುವುದು ಸರಿಯಲ್ಲ. ಚಾಸಾ.12 ರವರ ಮೌಖಿಕ ಸಾಕ್ಷ್ಯವನ್ನು ನಾನು ಓದಿ ನೋಡಿರುವುದಿಲ್ಲ.

ನಿಪಿ.5 ರ ಪುಟ ಸಂಖ್ಯೆ 9 ರ ಕ್ರಮ ಸಂಖ್ಯೆ 142 ರಿಂದ 147 ರವರೆಗೆ ನಮೂದಿಸಲಾಗಿರುವ ದಾಖಲಾತಿಗಳನ್ನು ನನ್ನ ವಿಚಾರಣೆಯಲ್ಲಿ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ ಎನ್ನುವುದು ಸರಿಯಲ್ಲ. ನಿಪಿ.30 ರಿಂದ ನಿಪಿ.102 ರವರೆಗೆ ಮೇಲಿನ ಕ್ರಮ ಸಂಖ್ಯೆ 142 ರಿಂದ 147 ರವರೆಗಿನ ದಾಖಲಾತಿಗಳು ಇರುವುದಿಲ್ಲ ಎನ್ನುವುದು ಸರಿಯಲ್ಲ. ಕ್ರಮ ಸಂಖ್ಯೆ 142 ರಿಂದ 147 ರವರೆಗಿನ ದಾಖಲಾತಿಗಳನ್ನು ನೀವು ಚಾಸಾ.12 ರವರಗೆ ನೀವು ನೀಡಿರುವುದಿಲ್ಲ ಎಂದು ಮಾಡಿದ ಸಲಹೆಗೆ ಸಾಕ್ಷಿ , ಮರೆತಿದ್ದೇನೆ , ಎನ್ನುತ್ತಾರೆ. ಈ ದಾಖಾಲಾತಿಗಳು Sanctioning Authority ಗೆ ಬಹಳ ಮುಖ್ಯವಾದ ದಾಖಲಾತಿಗಳು ಎನ್ನುವುದು ಸರಿ. ಸಾಕ್ಷಿ ಸದರಿ ದಾಖಲಾತಿಗಳನ್ನು ಪಿ ಎಫ್ ನಂ.29/08 ರಡಿಯಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ ಎಂದು ದಾಖಲಾತಿಯನ್ನು ನೋಡಿ ನುಡಿಯುತ್ತಾರೆ.

ಒಬ್ಬ ಸರ್ಕಾರಿ ನೌಕರ ಒಂದು ಆಸ್ತಿಯನ್ನು ತನ್ನ ಇಲಾಖೆಯಿಂದ ಅನುಮತಿಯನ್ನು ಪಡೆದು ಖರೀದಿಸಿ , ಅದನ್ನು ಖರೀದಿಸಲು ಸಾಲವನ್ನು ಪಡೆಯಲು ಸಹ ಅನುಮತಿಯನ್ನು ಪಡೆದು ಖರೀದಿಸಿದ್ದಲ್ಲಿ ಸದರಿ ಆಸ್ತಿ ಆ ಸರ್ಕಾರಿ ನೌಕರನ ಅಸಮಾನ ಆಸ್ತಿ ಎಂದು ಪರಿಗಣಿಸಲಾಗುತ್ತದೆಯೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ , ಸರ್ಕಾರಿ ನೌಕರ/ಅಧಿಕಾರಿ ಆತನ ಸೇವಾ ಅವಧಿಯಲ್ಲಿ ಆತ ಗಳಿಸಿದ ಆದಾಯ ಮತ್ತು ಖರ್ಚನ್ನು ಕೂಡಿಸಿ ನಂತರ ಇದನ್ನು ಆತ ತನ್ನ ಸೇವಾ ಅವಧಿಯಲ್ಲಿ ಗಳಿಸಿದ ಆದಾಯ ವನ್ನು ಕಳೆದಾಗ ಬರುವ ಹೆಚ್ಚುವರಿ ಮೊತ್ತವನ್ನು ಆತನ ಅಸಮಾನ ಆಸ್ತಿ ಎಂದು ಪರಿಗಣಿಸಿಸಲಾಗುತ್ತದೆ ಎನ್ನುತ್ತಾರೆ.

ಬೆಂಗಳೂರಿನ ಬಸವೇಶ್ವರನಗರದ ಅಪಾರ್ಟ್ ಮೆಂಟ್ ನಂಬರ್ 97/3 ಯನ್ನು ಆರೋಪಿ ತನ್ನ ಇಲಾಖಾ ಅನುಮತಿ ಪಡೆದು ಖರೀದಿಸಿರುತ್ತಾರೆ ಎನ್ನುವುದು ಸರಿ. ನಿಪಿ.42 ರಂತೆ ಆರೋಪಿ ತನ್ನ ಹೆಂಡತಿ ಹೆಸರಿನಲ್ಲಿ 16 ಲಕ್ಷ ಸಾಲವನ್ನು DHFL Vysya Housing Finance Ltd ದಿಂದ ಪಡೆದಿರುತ್ತಾರೆ ಎನ್ನುವುದು ಸರಿ. ಆತೋಪಿ ತಮ್ಮ ಇಲಾಖೆಯಿಂದ ಅನುಮತಿಯನ್ನು ಪಡೆದು ನಂತರ ಸದರಿ ಸಾಲವನ್ನು ಪಡೆದಿರುತ್ತಾರೆ ಎನ್ನುವುದು ಸರಿ. ನಿಪಿ.102 ರ 2 ನೇ ಕ್ರಮ ಸಂಖೆಯಲ್ಲಿ ಸದರಿ ಫ್ಲಾಟ್ ನಂಬರ್ 97/3 ಕ್ಕೆ

ಅಂದಾಜು ಮೌಲ್ಯ ಎಂದು ರೂ.40,00,000/- ಗಳನ್ನು ತೋರಿಸಿರುತ್ತೇನೆ ಎನ್ನುವುದು ಸರಿ. ನಿಡಿ.2 ರ ಪುಟ ಸಂಖ್ಯೆ 4 ರ ಆಸ್ತಿ ವಿವರದ ಕ್ರಮ ಸಂಖ್ಯೆ 1 ರಲ್ಲಿ ಈ ಫ್ಲಾಟ್ ನಂಬರ್ 97/3 ಗೆ ಅಂದಾಜು ಮೊತ್ತ ರೂ.23,10,000/- ಎಂದು ತೋರಿಸಲಾಗಿದೆ ಎನ್ನುವುದು ಸರಿ. ಈ ಮೌಲ್ಯವನ್ನು ನಮ್ಮ ಹಿಂದಿನ ಎಸ್ ಪಿ ಸಾಹೇಬರು source ವರದಿಯನ್ನು ಕಳುಹಿಸುವಾಗ ಅಂದಾಜಿಸಿರುತ್ತಾರೆ . ಆಸ್ತಿಯ ವಿವರದಲ್ಲಿ ಸದರಿ ಫ್ಲಾಟ್ ನ್ನು ರೂ.23,10,000/- ಕ್ಕೆ ಖರೀದಿಸಿರುತ್ತಾರೆ ಎಂದು ವಿವರಿಸಲಾಗಿದೆ ಎನ್ನುವುದು ಸರಿ. ಈ ಫ್ಲಾಟ್ ಖರೀದಿಸಲು ಆರೋಪಿ ನಿಪಿ.42 ರಂತೆ ರೂ.16,00,000/- ಸಾಲವನ್ನು DHFL Vysya Housing Finance Ltd ದಿಂದ ಪಡೆದಿರುತ್ತಾರೆ ಎನ್ನುವುದು ಸರಿ. ಉಳಿದ ಹಣವನ್ನು ಆರೋಪಿಯ ಹೆಂಡತಿ ವ್ಯವಸಾಯದ ಆದಾಯದ ಮೂಲಗಳಿಂದ ಭರಿಸುವರು ಎಂದು ಅನುಮತಿಯನ್ನು ಪಡೆದಿರುತ್ತಾರೆ ಎನ್ನುವುದು ಸರಿ. ಅದನ್ನು ಆಕೆ ತಮ್ಮ ಆದಾಯ ತೆರಿಗೆಯಲ್ಲಿ ತೋರಿಸಿರುತ್ತಾರೆ ಎಂದು ಮಾಡಿದ ಸಲಹೆಗೆ ಸಾಕ್ಷಿ , ಈ ಶೋಧನಾ ಕಾರ್ಯಚರಣೆ 2008 ರಲ್ಲಿ ನಡೆದಿದ್ದು , 2009 ರಿಂದ ಆರೋಪಿಯ ಹೆಂಡತಿ ಆದಾಯ ತೆರಿಗೆ ವರದಿಯನ್ನು ಸಲ್ಲಿಸಲು ಪ್ರಾರಂಭಿಸಿರುತ್ತಾರೆ ಎನ್ನುತ್ತಾರೆ. ಫ್ಲಾಟ್ ನಂ.97/3 ನ್ನು ಆರೋಪಿ ಇಲಾಖೆಯ ಅನುಮತಿಯನ್ನು ಪಡೆದು ಖರೀದಿಸಿರುವುದರಿಂದ ಸದರಿ ಆಸ್ತಿ ಅಸಮಾನ ಆಸ್ತಿ ಯ ಅಡಿಯಲ್ಲಿ ಬರುವುದಿಲ್ಲ ಎನ್ನುವುದು ಸರಿಯಲ್ಲ. ಏಕೆ ಸರಿಯಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ , ನಾವು ಕೇವಲ ಒಂದು ಆಸ್ತಿಯನ್ನು ಮಾತ್ರ ಪರಿಗಣಿಸಿ ಅಸಮಾನ ಆಸ್ತಿ ಎಂದು ನಿರ್ಧಾರಕ್ಕೆ ಬರುವುದಿಲ್ಲ, ಆತನ ಎಲ್ಲಾ ಆಸ್ತಿಗಳನ್ನು ಸೇರಿಸಿ ನಂತರ ಅಸಮಾನ ಆಸ್ತಿಯನ್ನು ಲೆಕ್ಕ ಹಾಕುತ್ತೇವೆ ಎನ್ನುತ್ತಾರೆ. ಆರೋಪಿಯ ಎಲ್ಲಾ ಆಸ್ತಿಗಳೊಂದಿಗೆ ಈ ಫ್ಲಾಟ್ ನಂ.97/3 ಯನ್ನು ಸಹ ಸೇರಿಸಿ, ಅವರ ಒಟ್ಟು ಗಳಿಕೆಯ ಆಸ್ತಿ ಎಂದು ಪರಿಗಣಿಸಿಸಲಾಗಿರುತ್ತದೆ. ಈ ಫ್ಲಾಟ್ ನಂ.97/3 ಗೆ source ವರದಿಯಲ್ಲಿ ರೂ.40,00,000/- ಎಂತಲೂ , ನಿಡಿ. 2 ರಲ್ಲಿ ರೂ.23,10,000/- ಎಂದು ಪರಿಗಣಿಸಲು ಕಾರಣವೇನು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ , ನನ್ನ ಹಿಂದಿನ ಅಧಿಕಾರಿಗಳು ಈ ಸ್ವತ್ತಿನ ಮೌಲ್ಯವನ್ನು ರಹಸ್ಯವಾಗಿ ಸಂಬಂದಪಟ್ಟ ಜನರಿಂದ ಕೇಳಿ ತಿಳಿದುಕೊಂಡು ನಂತರ ರಹಸ್ಯ ವರದಿಯಲ್ಲಿ ರೂ.40,00,000/-

ಎಂದು ಪರಿಗಣಿಸಿರುತ್ತಾರೆ ಎನ್ನುತ್ತಾರೆ . ಪ್ರ ವ ವ ದಲ್ಲಿ ಅಸಮಾನ ಆಸ್ತಿ ಶೇಕಡ 915 ಎಂದು ನಿರ್ಧಾರಕ್ಕೆ ಬಂದಿರಲು ಕಾರಣ ಮೇಲಿನ ಮನೆ ಸಂಖ್ಯೆ 97/3 ಕ್ಕೆ ಮೌಲ್ಯವನ್ನು ರೂ. 40,00,000/- ನಿಗಧಿಪಡಿಸಿರುವುದು ಕಾರಣವಾಗಿರುತ್ತದೆ ಎನ್ನುವುದು ಸರಿಯಲ್ಲ. ನಿಡಿ.2 ರಲ್ಲಿ ಸದರಿ ಮನೆಗೆ ಅಂದಾಜು ಮೊತ್ತವನ್ನು ರೂ.23,10,000/- ಎಂದು ನಿಗಧಿಪಡಿಸಿರುವುದರಿಂದ ಒಟ್ಟು ರೂ.2,10,40,000/- ಗಳಿಂದ ನಿಡಿ. 2 ರಲ್ಲಿ ರೂ.1,72,22,310/- ಕ್ಕೆ ಕಡಿಮೆಯಾಗಿರುತ್ತದೆ ಎನ್ನುವುದು ಸರಿಯಲ್ಲ. ಯಾಕೆ ಸರಿಯಿಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ , ಖರೀದಿಸುವಾಗ ಸರ್ಕಾರ ನಿಗಧಿಪಡಿಸಿದ ಮೊತ್ತ ರೂ.23,10,000/- ಎಂದು ಖರೀದಿ ಪತ್ರದಲ್ಲಿ ನಮೂದಿಸಿರುತ್ತಾರೆ . ಆದರೆ ಅದರ ನಿಜವಾದ ಮೌಲ್ಯ ರೂ. 40,00,000/- ವಾಗಿರುತ್ತದೆ. ಆ ಬೆಲೆಗೆ ಅವರು ಖರೀದಿ ಮಾಡಿರುತ್ತಾರೆ ಎನ್ನುತ್ತಾರೆ. ಈ ರೂ.40,00,000/- ದ ಮೌಲ್ಯ ನಿಮಗೆ ಹೇಗೆ ಸಿಕ್ಕಿತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ , ರಹಸ್ಯ ವರದಿಯನ್ನು ತಯಾರಿಸುವಾಗ ತನಿಖಾಧಿಕಾರಿ ಅಕ್ಕ ಪಕ್ಕದಲ್ಲಿ ಕಟ್ಟಡಗಳ , ಮನೆಗಳ ಮೌಲ್ಯವನ್ನು ಕೇಳಿ ತಿಳಿದುಕೊಂಡಿರುತ್ತಾರೆ ಎನ್ನುತ್ತಾರೆ. ಅಂತಿಮ ವರದಿಯಲ್ಲಿ ನಾನು ಈ ಮನೆ ನಂ.97/3 ರ ಮೌಲ್ಯವನ್ನು ರೂ.23,10,000/- ಎಂದೇ ಪರಿಗಣಿಸಿರುತ್ತೇನೆ. ಆರೋಪಿ ಯ ಪತ್ನಿ ಪಡೆದ ಸಾಲ ರೂ.16,00,000/- ಗಳನ್ನು, ಆರೋಪಿಯ ಖರ್ಚಿನ ಬಾಬ್ತಿನ ಅಡಿಯಲ್ಲಿ ಪರಿಗಣಿಸಲಾಗಿದೆ. ನಿಡಿ.2 ನ್ನು ನೀವು ಚಾಸಾ.12 ರವರಿಗೆ ನೀಡಿರುವುದಿಲ್ಲ ಎಂದು ಮಾಡಿದ ಸಲಹೆಗೆ ಸಾಕ್ಷಿ, 'ನೆನಪಿಲ್ಲ ' ಎನ್ನುತ್ತಾರೆ.

ನಿಪಿ.5 ರ ಪುಟ ಸಂಖ್ಯೆ 9 ರ ಕ್ರಮ ಸಂಖ್ಯೆ 143 ರಲ್ಲಿ ಆರೋಪಿಯ ಪತ್ನಿಯ ಹೆಸರಲ್ಲಿ ಜಮೀನನ್ನು ಖರೀದಿಸಲು ದಿ.20.01.2000 ದಂದು ಮೇಲಧಿಕಾರಿಗಳಿಂದ ಅನುಮತಿ ಪಡೆದ ಬಗ್ಗೆ ದಾಖಲಾತಿ ಎನ್ನುವುದು ಸರಿ. ಇದು ನಿಪಿ.102 ರ ಪುಟ ಸಂಖ್ಯೆ 2 ರ ಕ್ರಮ ಸಂಖ್ಯೆ 3 ನೇ ಆಸ್ತಿಯಾಗಿರುತ್ತದೆ. ಈ ಆಸ್ತಿಯ ಅಂದಾಜು ಮೌಲ್ಯ ಎಂದು ರೂ.30,00,000/- ಎಂದು ಪರಿಗಣಿಸಲಾಗಿದೆ ಎನ್ನುವುದು ಸರಿ. ಸದರಿ ಸ್ವತ್ತು ಅಂದರೆ 5 ಎಕರೆ ಜಮೀನನ್ನು ಆರೋಪಿಯ ಹೆಂಡತಿ ರೂ.2,00,000/- ಗಳಿಗೆ ಖರೀದಿಸಲು ಇಲಾಖೆಯಿಂದ

ಅನುಮತಿ ಪಡೆದಿರುತ್ತಾರೆ ಎನ್ನುವುದು ಸರಿ. ಅದನ್ನು ಆರೋಪಿಯ ಹೆಂಡತಿ ತಮ್ಮ ಆದಾಯ ತೆರಿಗೆಯ ವರದಿಯಲ್ಲಿ ತೋರಿಸಿರುತ್ತಾರೆ ಎಂದು ಮಾಡಿದ ಸಲಹೆಗೆ ಸಾಕ್ಷಿ , ನಮ್ಮ ಇಲಾಖೆ ದಾಳಿ ನಡೆಸಿದ ನಂತರದ ವರ್ಷಗಳಿಂದ ಆರೋಪಿಯ ಹೆಂಡತಿ ಆದಾಯ ತೆರಿಗೆಯನ್ನು ಸಲ್ಲಿಸಲು ಪ್ರಾರಂಭಿಸಿರುತ್ತಾರೆ ಎನ್ನುತ್ತಾರೆ. 1996 ರಿಂದಲೂ ಆರೋಪಿಯ ಹೆಂಡತಿ Income Tax returns file ಮಾಡುತ್ತಿದ್ದಾರೆ ಎಂದು ಸಂಬಂಧಪಟ್ಟ ಅಧಿಕಾರಿ ಈ ನ್ಯಾಯಾಲಯದ ಮಂದೆ ಸಾಕ್ಷ್ಯ ನುಡಿದಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಈ ಸ್ಥತ್ತಿಗೆ ಅಂದಾಜು ಆಸ್ತಿಯ ಮೌಲ್ಯ ರೂ. 30,00,000/– ಎಂದು ಆ ಸ್ಥತ್ತಿನ ಅಕ್ಕ ಪಕ್ಕದವರನ್ನು ವಿಚಾರಿಸಿ ಅಾಂದಾಜು ಮೌಲ್ಯವನ್ನು ಪರಿಗಣಿಸಿಸಲಾಗಿದೆ. ಈ ಆಸ್ತಿಯನ್ನು ಸಹ ಇಲಾಖೆಯ ಅನುಮತಿಯನ್ನು ಪಡೆದು , ಸಾಲವನ್ನು ಮಾಡಿ , ಅದಕ್ಕೂ ಸಹ ಇಲಾಖೆಯ ಅನುಮತಿಯನ್ನು ಪಡೆದು , ಖರೀದಿಸಿರುವುದರಿಂದ ಈ ಆಸ್ತಿ ಅಸಮಾನ ಆಸ್ತಿ ಎನ್ನುವ ಅಡಿಯಲ್ಲಿ ಬರುವುದಿಲ್ಲ ಎನ್ನುವುದು ಸರಿಯಲ್ಲ. 5 ಎಕರೆ ಜಮೀನಿಗೆ ರೂ.2,00,000/– ವಾದರೆ 10 ಎಕರೆ ಜಮೀನಿಗೆ ರೂ.4,00,000/– ವಾಗುತ್ತದೆ ಎನ್ನುವುದು ಸರಿಯಲ್ಲ. ನಿಪಿ.102 ರಲ್ಲಿ ಶೇಕಡ 915 ರಷ್ಟು ಹೆಚ್ಚುವರಿ ಅಕ್ರಮ ಆಸ್ತಿ ಹೊಂದಿರುತ್ತಾರೆ ಎಂದು ಘೋಷಿಸಲು ಈ ಸ್ಥತ್ತಿಗೆ ಅಂದಾಜು ಮೌಲ್ಯ ವನ್ನು ರೂ.30,00,000/– ಎಂದು ಪರಿಗಣಿಸಲಾಗಿರುತ್ತದೆ ಎನ್ನುವುದು ಸರಿಯಲ್ಲ. ದೋಷಾರೋಪಣಾ ಪಟ್ಟಿಯಲ್ಲಿ ಈ ಸ್ಥತ್ತಿನ ಅಂದಾಜು ಮೌಲ್ಯವನ್ನು ರೂ.30,00,000/– ಎಂದೇ ಪರಿಗಣಿಸಿರುತ್ತೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ , ಈ 10 ಎಕರೆ ಜಮೀನು ಸುಮಾರು 7–8 ಸರ್ವೇ ನಂಬರ್ ಗಳಲ್ಲಿ ಇದ್ದು, ಸಬ್ ರಿಜಿಸ್ಟ್ರಾರ್ ವ್ಯಾಲ್ಯೂ ಪೇಪರ್ ನೋಡಿ ಅಂದಾಜು ಮೌಲ್ಯ ವನ್ನು ದೋಷರೋಪಣಾ ಪಟ್ಟಿಯಲ್ಲಿ ತೆಗೆದುಕೊಳ್ಳಲಾಗಿದೆ ಎನ್ನುತ್ತಾರೆ. ದೋಷರೋಪಣಾ ಪಟ್ಟಿಯ ವಿಶ್ಲೇಷಣೆಯಲ್ಲಿ ಮೇಘನಾ ಫಾರಂ ಗೆ ಸಂಬಂದಪಟ್ಟಂತೆ ಯಾವುದೇ ವಿವರಣೆ ಇರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ, ಸಮಯ ನೀಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.